ಸದರೀ ದರಖಾಸ್ತುದಾರನಾದ ವೀರಣ್ಣ ಮೈನರ್ ಗಾರ್ಡಿಯ್ ಮತ್ತು ತಾಯಿ ಲಿಂಗಮ್ಮನ ಅರ್ಜೀಯನ್ನು 1885ನೇ ಇಸವಿ ಆ ಗಸ್ಟ್ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರೇಗವುಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಅರ್ಜೀ ನಂಬರ್ 338.

ಮೃತಪಟ್ಟ ಹುಚ್ಚಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಹುಚ್ಚಮ್ಮ, ಮೃತಪಟ್ಟ ಸದರೀ ಹುಚ್ಚಮ್ಮಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಮುಂಡಿ ಪೊಕ ಲಾ ಸ್ಥಳದ ಸದರೀ ಹುಚ್ಚಮ್ಮನು ಸದರೀ ವಾಸಸ್ಥಳಾಗಿ ಮೃತಪಟ್ಟ ಸದರೀ ಹುಚ್ಚಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ 50 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೆ ಈಕೋರ್ಟಿಗೆ ಬಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಹುಚ್ಚಮ್ಮನ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಚ್ಚಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಅರ್ಜೀ ನಂಬರ್ 353.

ಮೃತಪಟ್ಟ ಕೃಷ್ಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಲಕ್ಷ್ಮೀದೇವಮ್ಮ, ಮೃತಪಟ್ಟ ಸದರೀ ಕೃಷ್ಣಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹೊಳೆ ನರಸೀ ಪುರ ತಾಲ್ಲೂಕು ದೊಡ್ಡಕಾಡನೂರು ಹೋಬಳಿ ಈರೇಹಳ್ಳಿಕೊಪ್ಪಲು ಸ್ಥಳದ ಸದರೀ ಲಕ್ಷ್ಮೀದೇವಮ್ಮನವರು ಸದರೀ ತಾಲ್ಲೂಕು ಗೋಳ್ವಾ ಡಿ ವಾಸಸ್ಥರಾಗಿ ಮೃತಪಟ್ಟ ಸದರೀ ಕೃಷ್ಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವ ದಕ್ಕೆ 1860ನೇ ಇಸವಿ 27ನೇಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮೀದೇವಮ್ಮನವರ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಜುಲೈ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮದಸ್ತ ಬತ್ತೊಡನೆ ಕೊಜೋಣಾಗಿಧೆ.

ವಿ. ಎಸ್. ನರಸಿಂಹಯ್ಯಂಗಾರ್, ಡಿಸ್ಟ್ರಿಕ್ಟ್ ಜಡ್ಜ್.

ಆರಮನೆ ಇಲಾಖಾ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸಿನಿಂದ.

ತಾರೀಖು 21ನೇ ಜುಲೈ 1885.

ಇದರಿಂದಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಕಿಲ್ಲೇದಲ್ಲಿರುವ ಅಂಣೂರಾಮಯ್ಯರಿಂದಲೂ, ಈರಣ್ಣಗೆರೆಯ ಲ್ಲಿರುವ ಸ್ನಾನದಮನೆ ದೊಡ್ಡ ತಿದ್ದಪ್ಪನಿಂದಲೂ ಆರಮನೆ ಸರಕಾರಕ್ಕೆ ಬರಬೇಕಾದ ಹಣವನ್ನ ನೋಟೀಸ್ ಕೊಟ್ಟಾಗ್ಯೂ ವಾಯಿದೆ ವೊಳ ಗೆ ಅವರು ಕೊಡದೆ ಯಿದ್ದ ಸಬಬು ಈ ಕೆಳಗೆ ವಿವರಿಸಿರುವ ಅಣ್ಣೂರಾಮಯ್ಯರ ಮನೆಯನ್ನೂ, ದೊಡ್ಡ ತಿದ್ದಪ್ಪನ ಗದ್ದೇಯನ್ನೂ ಸಹಾ ಇದೇ ಇಸವಿ ಆಗಸ್ಟು 31ನೇ ತಾರೀಖು ದಿವಿ 11 ಘಂಟೆ ಲಾಗಾಯಿತು ಮೈಸೂರು ಕಿಲ್ಲೇದಲ್ಲಿ ಆರಮನೆ ಏಜಾನೆ ಬಳಿ ಈ ನೋಟೀಸಿಗೆ ಸೈನ್ ಮಾಡಿರತಕ್ಕ ಆಫೀಸರವರ ರೂಬರೂ ಹರಾಜು ಮಾಡಲ್ಪಡುತ್ತೆ. ಇಚ್ಛೆಯುಳ್ಳವರು ಬಂದು ಚೆಚ ದರಖಾಸ್ತು ಮಾಡಿ ಪಡಿಯು ಬಹುದು. ಹರಾಜಿನಲ್ಲಿ ಪಡವವರು ಹರಾಜು ಖೈದಾದ ಕೂಡ್ಲೆ ನಾಲ್ಕರಲ್ಲಿ ವಂದುಭಾಗ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಾದ್ದಲ್ಲದೆ ಪೂತಾ ಮೊಬಲಗು ಆ ಲಾಗಾಯತು ಹದಿನೈದು ದಿವಸದಲ್ಲಿ ಪೂರೀ ಮಾಡಿ ರೀತಿ ಪಡದು ಸ್ವತ್ತುಗಳನ್ನ ಸ್ವಾಧೀನ ಪಡಿಸಿಕೊಳ್ಳಬೇಕ್ಕು, ಪಾಗೆ ವಾಯಿದೆ ವೊಳಗೆ ಹಣ ಪೂರತೀ ಮಾಡದೆ ಯಿದ್ದರೆ ಸದರೀ ಸ್ವತ್ತುಗಳನ್ನ ಸರಕಾರದಿಂದ ಪುನಹಾ ಹರಾಜು ಮಾಡಿಸಿ ಲುಕರ್ಸಾ ಆಗತಕ್ಕ ಮೊಬಲಗಿಗೆ ಮೊದಲ್ ಹರಾಜಿನಲ್ಲಿ ಪಡದಿದ್ದವರನ್ನ ಗುರಿಮಾಡುತ್ತೆ, ತಿಳಿಯುವದು.

ಸ್ವತ್ತುಗಳ ವಿವರ.

1. ಮೈಸೂರು ಕಿಲ್ಲೇದಲ್ಲಿರುವದು ಪೂರ್ವಕ್ಕೆ ಗಲ್ಲಿ ಮತ್ತು ಆಪ್ಪಾಸ್ತ್ರಿಗಳ ಮನೆ, ಪಶ್ಚಿಮಕ್ಕೆ ತ್ರಿಪೇಶ್ವರಸ್ವಾಮಿ ದೇವಸ್ಥಾನದ ಯದರು ಭಾಗದಿಂದ ತಿರಗಾಡುವ ರಸ್ತೆ, ದಕ್ಷಿಣಕ್ಕೆ ತ್ರಿಪೇಶ್ವರಸ್ವಾಮಿ ದೇವಸ್ಥಾನದ ಮಗ್ಗಲು ರಸ್ತೆ, ಉತ್ತರಕ್ಕೆ ಮಾದಪ್ಪನ ಮನೆ, ಈ ಚತುರ್ಮಾಧ್ಯದಲ್ಲಿರುವದು ದುಮಂಜಲೆ ಮನೆ, ಈ ಮನೆ ಮೇಲೆ ಆಣ್ಣೂರಾಮಾಯರಿಂದ ಸರಕಾರಕ್ಕೆ ಬರಬೇಕಾದ ಮೊಬಲಗು 1,065 ರೂಪಾಯಿಗಳು.

1. ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ವೈ'ೀ ಸರ್ವಮಾನ್ಯ ದೊಡ್ಡೇಗೌಡನ ಕೊಪ್ಪಲ್‌ನಲ್ಲಿರುವದು ಪೂರ್ವಕ್ಕೆ ಗೋಮಾಳ, ದಕ್ಷಿಣಕ್ಕೆ ಹೊಳೆ ಅರಗು, ಪಶ್ಚಿಮಕ್ಕೆ ಶಾನುಭೋಗ ಕೃಷ್ಣಪ್ಪನ ಗದ್ದೆ, ಉತ್ತರಕ್ಕೆ ಮೊಖಾಮಿ ಗದ್ದೇ ಮತ್ತು ಲಿಂಗೇಗೌಡನ ಗದ್ದೇ ಈ ಚತುರ್ಮಾಧ್ಯದಲ್ಲಿರುವ ಬೀಜವರೀ ಎ॥ಎ॥ಎ॥ ಹಂದಾಯ' ಲೋಕಲ್‌ಫಂಡ್ ವಗೈರೆ 34 ರೂಪಾಯಿವುಳ್ಳ ತರೀ ಜಮೀನು.

ಈ ಗದ್ದೇ ಮೇಲೆ ಸ್ಥಾನದಮನೆ ದೊಡ್ಡಿದ್ದಪ್ಪನಿಂದ ಸರಕಾರಕ್ಕೆ ಬರಬೇಕಾದ ಮೊಬಲಗು 1,500 ರೂಪಾಯಿಗಳು.

ಇ. ಚಿತಂಬರಂಐಯ್ಯರ್,
ಆರಮನೆ ಇಲಾಖಾ ಅ॥ ಕಮ್ಮಿಷನರ್.

ರಿಜಿಸ್ಟ್ರೇಷನ್ ಆಫೀಸ್.

ನಂ. 4. ತಾರೀಖು 21ನೇ ಜುಲೈ 1885.

ಇದರಿಂದ ತಿಳಿಯಪಡಿಸುವದೇನಂದರೆ, ಡಿ॥ ಮ॥ ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದೇವಾದಾಯವಾಗಿ ಜಾತೀಲಿರುವ ಈ ಕೆಳಗೆ ತಪಸೀಲ್ ವಿವರಿಸುವ ದಸ್ತಾವೇಜುಗಳ ಮಾಲೀಕರಾಗಲಿ ಅಥವಾ ಕ್ರಮವಾಗಿ ಮೊಖ್ತ್ಯಾರಿ ಹೊಂದಿದ ಮುತಾಲೀಕರಾಗಲಿ, ಈ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ನರಸೀ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ತೆಗದುಕೊಳ್ಳಬಹುದು, ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಬಂದಿದ್ದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
1883—84 ——— 13	ತಲ್ಕಾಡಿನಲ್ಲಿರುವ ಗುರು ಸಾಂತಯ್ಯನ ವೀರಪಟ್ಟಿ	ತಲ್ಕಾಡ ತಾಲ್ಲೂಕು ಈಸಬಾ ಹೋಬಳಿ ಪಟ್ಟಣ್ಣಿ ಗ್ರಾಮದಲ್ಲಿರುವ ದಸ್ತು ಚಿಕ್ಕಮಲ್ಲಯ್ಯ	5—4—83	5—4—83	195 ರೂಪಾಯಿನ ಜಮ್ಮಿ ಕ್ರಯ ಪತ್ರ.
1883—84 ——— 63	ಮೈಸೂರು ಬಕಷಿನರಸಪ್ಪನವರ ಆಗ್ರಹಾರದಲ್ಲಿರುವ ಅಶ್ವಥಶಾಸ್ತ್ರಿಗಳ ಮಗ ಕೃಷ್ಣಶಾಸ್ತ್ರಿ)	ತಿರುಮಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿ ಇರುವ ಪಟ್ಟಿದ ವೇತಾರಾಮ ಶಾಸ್ತ್ರಿ)	23—4—83	23—4—83	50 ರೂಪಾಯಿನ ಜಮ್ಮಿ ಕ್ರಯಪತ್ರ.
1883—84 ——— 82	ನಂಜನಗೂಡು ತಾಲ್ಲೂಕು ತಗಡೂರಲ್ಲಿರುವ ಸ್ಮಾರ್ತ ಬ್ರಾಹ್ಮಣ ರಾಮಸ್ವಾಮಿಯ್ಯನ ಮಗ ಸುಬ್ಬಣ್ಣ	ತಿ॥ ನರಸೀಪುರ ತಾಲ್ಲೂಕು ಮೂಗೂರು ಹೋಬಳಿ ಜೋಡಿ ಕಂಠಾಗಾಲ್ ಗ್ರಾಮದಲ್ಲಿರುವ ಸ್ಮಾರ್ತ ಬ್ರಾಹ್ಮಣ ದೊಡ್ಡಕೃಷ್ಣಂಭಟ್ಟರ ಮಗ ವಿಶ್ವೇಶ್ವರಯ್ಯ	27—4—83	27—4—83	200 ರೂಪಾಯಿನ ಜಮ್ಮಿ ಕ್ರಯ ಪತ್ರ.

ಶ್ರೀನಿವಾಸಯ್ಯಂಗಾರ್,
ಫಾರ್ ರಿಜಿಸ್ಟ್ರಾರ್.